ಗಾಳಿಯನ್ನು ನಿರ್ಮಿಸಿ ಪೂರ್ಣ ಆಮ್ಲಜನಕವನ್ನೇ ಆಕೆಯ ಮುಖದ ಮೇಲೆ ಬೀರಿದೆ.

ಎಷ್ಟು ಹೊತ್ತಾದರೂ ಪ್ರಜ್ಞೆ ಬರದೇ ಇರುವುದನ್ನು ಕಂಡು ಎಲ್ಲರೂ ಗಾಬರಿಗೊಂಡರು. ಆದರೆ ಗುರುಪಾದಪ್ಪನಿಗೆ ಏನೋ ಒಂದು ಅಪರಿಮಿತ ವಿಶ್ವಾಸವಿತ್ತು. ಮಧ್ಯಾಹ್ನದ ವೇಳೆಗೆ ಗೌರವ್ವ ಕಣ್ಣುಬಿಟ್ಟು 'ನೀರು ನೀರು' ಎಂದಳು. ನೋವು ನಿವಾರಕವಾದ ಏನೇನೋ ಕಷಾಯವನ್ನು ಕುಡಿಸಿದವನು ಸಂಜೆವರೆಗೂ ಹಾಗೆಯೇ ಮಲಗಿರುವಂತೆ ಹೇಳಿದ. ಅವತ್ತು ಪಶ್ಚಿಮದಲ್ಲಿ ಮುಳುಗುತ್ತಿದ್ದ ಸೂರ್ಯ ನನಗೇಕೋ ವಿಶೇಷವಾಗಿ ಕಂಡ. ಅವನ ಸುತ್ತ ನಿರ್ಮಿಸಿರುವ ಪ್ರಭಾವಳಿಯನ್ನು ನೋಡಿದೆ. ಹಳದಿ, ಕಿತ್ತಳೆ, ಕೆಂಪು ರಂಗನ್ನು ಇಡೀ ಆಕಾಶಕ್ಕೆ ಎರಚಿದ್ದ. ಅದರ ಮಧ್ಯದಿಂದ ಬೆಳ್ಳಿ ಕಿರಣಗಳು ತೂರಿ ತೂರಿ ಎತ್ತೆತ್ತಲೋ ಸಾಗುತ್ತ ಒಂದು ವಿಶಿಷ್ಟ ಪ್ರಭಾವಳಿಯನ್ನು ನಿರ್ಮಿಸಿತ್ತು. ನಿನ್ನಿಂದಲೇ ಈ ಜೀವ ಜಗತ್ತು ಬದುಕಿರುವುದು ಎಂದು ಕೃತಜ್ಞತೆ ಸೂಚಿಸಿದೆ.

ಗೌರವ್ವ ನನ್ನನ್ನು ತದೇಕಚಿತ್ತದಿಂದ ನೋಡುತ್ತಲೇ ಸಂಜೆಯವರೆಗೂ ಮಲಗಿದ್ದವಳು, ನಡೆದದ್ದೆಲ್ಲ ನನ್ನದೇ ಪ್ರಭಾವಳಿಯಿಂದ ಎಂದು ಭಾವಿಸಿ ಧನ್ಯತೆಯಿಂದ ಗಂಟಲುಬ್ಬಿಸಿಕೊಂಡು ಬಿಕ್ಕಿದಳು. ಇಬ್ಬರು ಮೆಲ್ಲಗೆ ಕೈಹಿಡಿದು ಎಬ್ಬಿಸಿ ಕೂರಿಸಿದ ನಂತರ ಧನ್ಯತೆಯಿಂದ ನನಗೆ ಕೈಮುಗಿದು, ಗುರುಪಾದಪ್ಪನ ಕಾಲಿಗೆ ನಮಸ್ಕರಿಸಿ ಮರುಜನ್ಮ ಪಡೆದವಳಂತೆ ತನ್ನ ಮನೆಯತ್ತ ನಿಧಾನಕ್ಕೆ ಹೆಜ್ಜೆ ಇಟ್ಟಿದ್ದಳು...

ಕೊಂಬೆ–8

ಭೂಮಿಯ ಮೇಲೆ ಜನರು, ಪ್ರಾಣಿಪಕ್ಷಿಗಳು ತಮ್ಮ ಅಸ್ತಿತ್ವವನ್ನು ಪ್ರತಿಪಾದಿಸಲು ಏನೆಲ್ಲ ಕಷ್ಟಪಡುತ್ತಾರೋ ಅಷ್ಟೇ, ಅಥವಾ ಅದಕ್ಕಿಂತಲೂ ಅಧಿಕವಾಗಿ ನಾವು ನಮ್ಮ ಬೇರುಗಳನ್ನು ಭೂಮಿಯೊಳಗೆ ಪ್ರತಿಷ್ಠಾಪಿಸಿಕೊಳ್ಳಲು ಹೋರಾಡುತ್ತೇವೆ. ಮೇಲ್ನೋಟಕ್ಕೆ ಕಂಡುಬರದ ಈ ಹೋರಾಟ ಭೂಮಿಯೊಳಗೇ ಮುಸುಕಿನೊಳಗಿನ ಗುದ್ದಾಟದಂತೆ ನಡೆಯುತ್ತಲೇ ಇರುತ್ತದೆ. ಮಣ್ಣಿನೊಳಗೆ ಹರಿದುಬಂದ ಒಂದು ಮರದ ಬೇರನ್ನು ಇನ್ನೊಂದು ಮರದ ಬೇರುಗಳು ಹಿಮ್ಮೆಟ್ಟಿಸಲು ಹೋರಾಟ ನಡೆಸುತ್ತಿರುತ್ತವೆ. ಎಲ್ಲ ನೀರು, ಗೊಬ್ಬರ, ಖನಿಜಾಂಶಗಳನ್ನೆಲ್ಲ ಝುರ್ರನೆ ಹೀರಿಕೊಂಡು ಇನ್ನೊಂದು ಜಾತಿಯ ಬೇರು ಅಲ್ಲಿ ಮುಂದುವರೆಯದಂತೆ ನಿರ್ಜೀವ ಮಾಡಿಬಿಡುತ್ತವೆ. ಮರದೊಳಗಿನ ತಾಕತ್ತು ಜಾಸ್ತಿ ಇದ್ದರೆ ಮಣ್ಣೊಳಗೇ ಅದರ ತುದಿಯನ್ನು ಅಮುಕಿ ಜೀವ ಹಿಂಡಿಬಿಡುತ್ತವೆ. ಹಾಗಂತ ಎಲ್ಲ ಜಾತಿಯ ಬೇರುಗಳ ಜೊತೆಯೂ ಹೀಗೇ ಹೋರಾಟ ನಡೆಯುತ್ತದೆ ಎಂದೇನೂ ಅಲ್ಲ, ಅನೇಕ ಬೇರುಗಳ ಜೊತೆ ಸಾಮರಸ್ಯದ ಜೀವನವನ್ನೂ ನಡೆಸುತ್ತವೆ. ತಮ್ಮ ಆಹಾರವನ್ನು ಬಿಟ್ಟುಕೊಟ್ಟು ಇನ್ನೊಂದು ಮರವನ್ನು ಬೆಳೆಸುವ ಸಂದರ್ಭಗಳೂ ಇಲ್ಲದಿಲ್ಲ.

ಹೋರಾಟ ಎಂದ ಕೂಡಲೇ ನೆನಪಾಯಿತು. ಹೋರಾಟವು ರಕ್ತಪಾತದಿಂದಲೇ ನಡೆಯ ಬೇಕೆಂದೇನೂ ಇಲ್ಲ. ರಕ್ತಪಾತವಿಲ್ಲದೆಯೂ ನಡೆಯಬಹುದಲ್ಲವೇ? ಅಂಥ ಒಂದು ಸಾಧ್ಯತೆಯನ್ನು ಮನುಕುಲಕ್ಕೆ ತೋರಿಸಿದ್ದೇ ಗಾಂಧಿ. ಇತಿಹಾಸದುದ್ದಕ್ಕೂ ಬಲವಿದ್ದವನೇ ಬದುಕಲು ಸಾಧ್ಯವೆಂಬ ನಿಯಮದ ಮೇರೆಗೇ ದುರ್ಬಲರನ್ನು, ಧ್ವನಿಯಿಲ್ಲದವರನ್ನು ದಮನಿಸುತ್ತಲೇ ಬರಲಾಗಿದೆ.

ಬಲವಿದ್ದವನು, ಬಲವಿಲ್ಲದವನ ರಕ್ತವನ್ನು ಹೀರಿಯೇ ಮೇಲೆ ಬಂದಿರುವುದು; ಅವರ ರಕ್ತವನ್ನು ಚೆಲ್ಲಾಡಿ ಅವರ ಸಮಾಧಿಯ ಮೇಲೆಯೇ ಸಾಮ್ರಾಜ್ಯಗಳನ್ನು ಕಟ್ಟಿರುವುದು. ಆದರೆ ಹೀಗೆ ದಮನಿತರನ್ನು, ದನಿಯಿಲ್ಲದವರನ್ನು ಒಗ್ಗೂಡಿಸಿಕೊಂಡು ಅವರಿಂದಲೇ ಧ್ವನಿ ಹೊರಡಿಸಬಲ್ಲ, ನಿಶ್ಶಬ್ದದ ಮೂಲಕವೇ ಶಬ್ದ ಹೊರಡಿಸಬಲ್ಲ, ನಿಶ್ಶಕ್ತಿಯ ಮೂಲಕವೇ ಶಕ್ತಿ ಪ್ರದರ್ಶಿಸಬಲ್ಲ ಅಖಂಡ ಸಂಚಲನವನ್ನು ಮೂಡಿಸಿದಾತನೇ ಗಾಂಧಿ. ನೂರಾರು ವರ್ಷಗಳ ಕಾಲ ಪರಕೀಯರಿಂದ ಆಳಿಸಿಕೊಂಡೇ ಬಂದಿದ್ದ ಭಾರತೀಯರಿಗೆ, ಅವರಿರುವುದೇ ಆಳಲು, ನಾವಿರುವುದೇ ಆಳಿಸಿಕೊಳ್ಳಲು ಎಂಬ ಮನೋಭಾವ ಬೇರು ಬಿಟ್ಟುಬಿಟ್ಟಿತ್ತು. ಹಾಗಾಗಿ ರಾಜಪ್ರಭುತ್ವದ ದಾಸರಾಗಿದ್ದ ಜನರಿಗೆ ಮೊಗಲರ ಆಳ್ವಿಕೆಯಾದರೇನು, ಬ್ರಿಟಿಷರ ಆಳ್ವಿಕೆಯಾದರೇನು ಎಲ್ಲವೂ ಒಂದೇ ಆಗಿಬಿಟ್ಟಿತ್ತು. ಅಂಥದರಲ್ಲಿ ನಮ್ಮನ್ನು ನಾವೇ ಆಳಿಕೊಳ್ಳಬೇಕೆಂಬ ಆಶಾಕಿರಣವನ್ನು ಬೆಳಗಿಸಿದ್ದೇ ಈ ಗಾಂಧಿ ಎಂಬ ಬಡಕಲು ದೇಹದ ಫಕೀರ.

ಗಾಂಧಿ ಹುಟ್ಟಿನಿಂದೇನೂ ಹಾಗಿರಲಿಲ್ಲ. ಆಗರ್ಭ ಶ್ರೀಮಂತನೇ. ಆಗಿನ ಕಾಲಕ್ಕೇ ವಿದೇಶಕ್ಕೆ ಹೋಗಿ ಓದಿ ಬಂದಿದ್ದಾನೆಂದರೆ ಲೆಕ್ಕ ಹಾಕಿಕೊಳ್ಳಿ. ಅಲ್ಲಿಯೇ ವಕೀಲಿಕೆ ಮಾಡಿ ಸೂಟುಬೂಟುಟೈ ಹಾಕಿಕೊಂಡು ಶಿಸ್ತಿನ ಜೀವನ ನಡೆಸಿದ್ದವನೇ. ದಕ್ಷಿಣ ಆಫ್ರಿಕಾದಲ್ಲಿನ ಬಿಳಿಯರ ಆರ್ಭಟಕ್ಕೆ ಬಲಿಯಾದಾಗಲೇ, ಭಾರತೀಯರ ಜನಾಂಗೀಯ ದ್ವೇಷದ ನೋವು ಅರಿವಾಗಿ, ಅವರನ್ನು ವಿಮುಕ್ತಿಗೊಳಿಸಬೇಕೆಂಬ ಸಂಕಲ್ಪ ಮಾಡಿ ನಿರಾಯುಧನಾಗಿ, ಬರಿಗೈಯಲ್ಲಿ ಹೋರಾಟ ಮಾಡಲು ಮುಂದೆ ಬಂದವನೇ ಈ ಗಾಂಧಿ.

ಗಾಂಧಿಯ ಬಗ್ಗೆಯೇ ನೂರಾರು ದಂತಕಥೆಗಳಿವೆ. ನಾನೀಗ ಹೇಳಹೊರಟಿರುವುದು ಅಂಥ ದಂತಕಥೆಯನ್ನಲ್ಲ. ಆದರೆ ಹೀಗೆ ದಂತಕಥೆಯಾದವನೂ ಸಾಮಾನ್ಯನೊಬ್ಬನನ್ನು ಹುಡುಕಿಕೊಂಡುಬಂದಂಥ ಪ್ರಸಂಗವನ್ನು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಗಾಂಧಿಗೆ, ತನ್ನಂತೆಯೇ ಮೂಳೆ ಬಿಟ್ಟುಕೊಂಡ ದೇಹದ ಕಡ್ಡಿಕಾಲಿನ ಹುಡುಗನೊಬ್ಬ ಸ್ಥಳೀಯವಾಗಿ ತನ್ನಂತೆಯೇ ಭಾಷಣ ಮಾಡುತ್ತ ಜನರನ್ನು ಹೋರಾಟಕ್ಕೆ ಹುರಿದುಂಬಿಸುತ್ತಿರುವ ವಿಷಯ ಕಿವಿಗೆ ಬಿತ್ತು.

ಸಣ್ಣ ವಯಸ್ಸಿನಲ್ಲೇ ನಾಟಕದ ಹುಚ್ಚಿದ್ದ ಮುದ್ದುವೀರಪ್ಪನಿಗೆ ಯಾಕೆ ಗಾಂಧಿಯಂತೆ ತಾನೂ ವೇಷ ಹಾಕಿ, ಅವರಂತೆಯೇ ಭಾಷಣ ಮಾಡಬಾರದೆಂಬ ಅನಿಸಿಕೆ ಮೂಡುತ್ತಿದ್ದಂತೆಯೇ ಪ್ರಯೋಗಕ್ಕಿಳಿಸಿಯೇ ಬಿಟ್ಟ. ದೇಶಾದ್ಯಂತ ಓಡಾಡಬೇಕಿದ್ದ ಗಾಂಧಿಗೆ ತಮ್ಮೂರುಗಳಿಗೆ ಬರಲು ಎಲ್ಲಿ ಸಾಧ್ಯ ಎಂದರಿತು ಸುತ್ತಮುತ್ತಲ ನೂರಾರು ಹಳ್ಳಿಗಳಿಗೆ ಹೋಗಿ ಅರಳೀಕಟ್ಟೆಗಳ ಮೇಲೆ ನಿಂತು ಗಾಂಧಿಯ ವಿಚಾರಧಾರೆಗಳನ್ನು ತಮ್ಮದೇ ಭಾಷೆಯಲ್ಲಿ ಪ್ರಚಾರಿಸುತ್ತಿದ್ದ. ಪೊಲೀಸರೂ ಅವನ ಮೇಲೆ ಕೇಸು ಜಡಿದು ಜೈಲಿಗೆ ಹಾಕಲು ನೋಡಿದರೂ, ಗಾಂಧಿಯನ್ನೇ ಜೈಲಿಗೆ ಹಾಕಲು ಸಾಧ್ಯವಾಗದ ವಿಷಯದ ಮೇಲೆ ಈ ಅಭಿನವ ಗಾಂಧಿಯನ್ನೂ ಜೈಲಿಗೆ ಹಾಕಲು ಸಾಧ್ಯವಿಲ್ಲ ಎಂದು ತೆಪ್ಪಗಾದರು. ದಿನಾಲೂ ಈತನ ಮಾತುಗಳನ್ನು ಕೇಳುತ್ತಾ, ಈತನೇ ನಿಜವಾದ ಗಾಂಧಿ ಎಂದು ಎಷ್ಟೋ ಜನ ನಂಬಿಬಿಟ್ಟಿದ್ದರು. ಒಂದು ವೇಳೆ ಗಾಂಧಿಯೇ ಬಂದು ಹೇಳಿದ್ದರೂ, ಜನ ಆತನನ್ನೇ ಡೂಪ್ಲಿಕೇಟ್ ಗಾಂಧಿ ಎಂದುಬಿಡುತ್ತಿದ್ದರೇನೋ, ಅಷ್ಟು ಪ್ರಭಾವಿಸಿಬಿಟ್ಟಿದ್ದ.

ಮುದ್ದುವೀರಪ್ಪ ಗಾಂಧಿಯನ್ನು ಎಂದಾದರೂ ನೇರವಾಗಿ ನೋಡಿದ್ದನೋ ಇಲ್ಲವೋ ಗೊತ್ತಿಲ್ಲ. ಆದರೆ ಆತನ ತತ್ವ, ನಿಷ್ಠೆ, ಪ್ರಾಮಾಣಿಕತೆ, ನೈತಿಕತೆಗಳೆಲ್ಲವೂ ಅಪರಂಪಾರ ಗಾಂಧಿಯನ್ನೇ ಹೋಲುತ್ತಿದ್ದವು. ಈ ಸುದ್ದಿ ಎಷ್ಟು ಪ್ರಚಲಿತವಾಗಿತ್ತೆಂದರೆ, ಈ ವಿಷಯ ಗಾಂಧಿಯಂಥ ಗಾಂಧಿಯ ಕಿವಿಗೂ ಬಿದ್ದುಬಿಟ್ಟಿತ್ತು.

ಗಾಂಧಿ ತನ್ನನ್ನು ಕಾಣುವಂತೆ ಒಂದು ಮಾತು ಹೇಳಿ ಕಳಿಸಿದ್ದರೆ ಸಾಕಿತ್ತು, ಮುದ್ದುವೀರಪ್ಪ ಓಡೋಡಿ ಹೋಗಿ ಅವರ ಆಶೀರ್ವಾದ ಪಡೆದು ಬರುತ್ತಿದ್ದನೇನೋ. ಆದರೆ ಗಾಂಧಿ ಹಾಗೆ ಮಾಡಲಿಲ್ಲ. ತಾನೇ ಹೋಗಿ ಒಂದು ದಿನ ಈ ಅಭಿನವ ಗಾಂಧಿಯನ್ನು ಕಂಡುಬರಬೇಕು ಎಂದು ಭಾವಿಸಿಬಿಟ್ಟಿದ್ದರು. ಹಾಗೆಂದು ಕಸ್ತೂರ್ ಬಾ ಜೊತೆ ಹೇಳಿಕೊಂಡಿದ್ದರು ಕೂಡ.

ಅದಕ್ಕೂ ಒಂದು ದಿನ ಕಾಲ ಕೂಡಿಬಂದಿತು. ಗಾಂಧಿ ಬೆಂಗಳೂರಿಗೆ ಬರುತ್ತಿರುವ ಸುದ್ದಿಯನ್ನು ಮೈಸೂರು ಮಹಾರಾಜರಿಗೆ ತಲುಪಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅಕಾಲಿಕ ನಿಧನದ ನಂತರ ಜಯಚಾಮರಾಜೇಂದ್ರ ಒಡೆಯರ್ ಅವರು ಅಧಿಕಾರಕ್ಕೆ ಬಂದಿದ್ದರು. ಯುವಕರಾಗಿದ್ದ ಜಯಚಾಮರಾಜೇಂದ್ರರಿಗೆ ಗಾಂಧಿಯವರ ಬಗ್ಗೆ ಅಪಾರ ಒಲವು. ಅವರ ಚಿಂತನೆಗಳಾಗಿದ್ದ ಗ್ರಾಮೋದ್ಧಾರವೇ ದೇಶೋದ್ಧಾರ ಎನ್ನುವ ಮಾತಿನಂತೆ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಆದ್ಯತೆ, ಹರಿಜನರಿಗೆ ದೇವಾಲಯಗಳಿಗೆ ಪ್ರವೇಶ, ರಾಜಕೀಯದಲ್ಲಿ ಮೀಸಲಾತಿ, ಭಿಕ್ಷುಕರಿಗೆ ಪುನರ್ವಸತಿ ಕೇಂದ್ರಗಳ ಸ್ಥಾಪನೆ ಮುಂತಾದ ಅನೇಕ ನವವಿಚಾರಗಳನ್ನು ಪಂಚವಾರ್ಷಿಕ ಯೋಜನೆಗಳಡಿ ತಂದು ರಾಮರಾಜ್ಯದ ಸಾಕಾರದ ಕನಸು ಕಂಡಿದ್ದವರು. ದಿವಾನರಿಗೆ ಹೇಳಿ ಉಳಿದುಕೊಳ್ಳಲು ಸುಸಜ್ಜಿತ ವ್ಯವಸ್ಥೆ ಮಾಡಿಸಿದ್ದರು. ಈ ಬಾರಿ ಗಾಂಧಿಯ ಜೊತೆಯಲ್ಲಿ ಕಸ್ತೂರ್ ಬಾ ಕೂಡ ಬರುತ್ತಾರೆಂದು ತಿಳಿದು ಹೆಚ್ಚಿನ ಮುತುವರ್ಜಿ ವಹಿಸಲು ತಿಳಿಸಿದ್ದರು. ಹಾಗಾಗಿ ಸ್ವತಃ ತಮ್ಮದೇ ಕಾರನ್ನೂ ಗಾಂಧಿಯವರ ಓಡಾಟಕ್ಕೆ ಮೀಸಲಿಟ್ಟಿದ್ದರು.

(ಸಶೇಷ)